# ಮಾನಹೀನನಿಗೆ ಅಭಿಮಾನವೇಕೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 451.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 179.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 56.
4. **Note:** Lyrics mentioned without highlights are as per Ref. 1. The wordings in Ref. 2 are same as in Ref. 1. Lyrics in Ref. 3 are different and are given separately in green highlights.
5. **Note:** Singer has followed lyrics as in Ref. 1.

ರಾಗ: ಕಾಂಭೋಜಿ ತಾಳ: ಅಟ

ಮಾನ ಹೀನನಿಗೆ ಅಭಿಮಾನವೇಕೆ
ಜ್ಞಾನವಿಲ್ಲದವಂಗೆ ಗುರು ಬೋಧೆಯೇಕೆ ॥ ಪ ॥

ಕಾಡೊಳಗೆ ತಿರುಗುವಗೆ ಕನಕ ಭೂಷಣವೇಕೆ
ಒಡೊಳಗೆ ತಿಂಬುವಗೆ ಹರಿವಾಣವೇಕೆ
ಬೇಡಿದರೆ ಕೊಡದಿಹಗೆ ಕಡು ಬಿಂಕತನವೇಕೆ
ಪಾಡಲರಿಯದವಂಗೆ ಪ್ರೌಢತನವೇಕೆ ॥ ೧ ॥

ಅಂಬಲಿಯನಂಬುವಗೆ ಅಮೃತಾನ್ನವದೇಕೆ
ಕಂಬಳಿಯ ಹೊದೆವವಗೆ ಮಾಡಿಯೇತಕೆ
ಡೊಂಬಾಟಕಿಕ್ಕುವಗೆ ಗಾಂಭೀರ್ಯತನವೇಕೆ
ಹಂಬಲನು ಬಿಡದವಗೆ ಹರಿ ನಾಮವೇಕೆ ॥ ೨ ॥

ಭೂಸುರರ ಕೊಲುವವಗೆ ಭೂರಿ ಧರ್ಮಗಳೇಕೆ
ಭಾಷೆಗೆಟ್ಟವಗೆ ನಂಬುಗೆಯೇತಕೆ
ಕ್ಲೇಶ ಒಡಲೊಳಗಿರಲು ತೀರ್ಥಯಾತ್ರೆಗಳೇಕೆ

ಆಸೆ ಬಿಡದಿದ್ದವಗೆ ಸಂನ್ಯಾಸವೇಕೆ || ೩ ||

ಮಿತಿಮೀರಿ ನಡೆವವಗೆ ವ್ರತ ನೇಮಗಳು ಏಕೆ
ಸತಿಗೆ ಅಳುಕುವನ ಸಾಹಸವು ಏಕೆ
ಮತಿ ಶುದ್ಧಿ ಇಲ್ಲದಾ ಮಂತ್ರ-ತಂತ್ರಗಳೇಕೆ
ಗತಿಯ ಚಿಂತಿಸದವನ ವಿಪ್ರತ್ವವೇಕೆ || ೪ ||

ಸಾಮಾನ್ಯನಿಗೆ ಸಾರ್ವಭೌಮ ಪದವಿಯದೇಕೆ
ಪ್ರೇಮವಿಲ್ಲದ ಬಂಧು ಜನವೇತಕೆ
ಸ್ವಾಮಿ ಶ್ರೀ ಪುರಂದರ ವಿಠ್ಠಲನ ನೆನಯದಿಹ
ತಾಮಸಾಧಮನಿಗೆ ಕೈವಲ್ಯವೇಕೆ || ೫ ||

**Note:** The below given lyrics are as per Ref. 3.

ರಾಗ: ಕಾಂಬೋದಿ ತಾಳ: ಝಂಪೆ

ಮಾನ ಹೀನರಿಗೆ ಅಭಿಮಾನವೇಕೆ, ಪ್ರ-
ಧಾನಿಯಿಲ್ಲದ ಅರಸುತನವೇಕೆ, ಕೃಷ್ಣಾ || ಪ ||

ಕಾಡಿನೊಳು ತಿರುಗುವಗೆ ಕನಕ ಭೂಷಣವೇಕೆ
ಓಡಿನಲಿ ಉಂಬುವಗೆ ಹರಿವಾಣವೇಕೆ
ಬೇಡಿದರೆ ಕೊಡದ ಲೋಭಿಗೆ ಬಿಂಕವೇಕೆ
ಪಾಡಲಾರಿಯದೆ ಪ್ರೌಢತನವೇಕೆ, ಕೃಷ್ಣಾ || ೧ ||

ಪತಿ ಮೀರಿ ನಡೆವವಳ ವ್ರತ-ನೇಮತನವೇಕೆ
ಸತಿಗಳುಕಿ ನಡೆವವಗೆ ಸ್ವಾತಂತ್ರ್ಯವೇಕೆ
ಮಾತಿಗೆಟ್ಟು ತಿರುಗುವಗೆ ಮಂತ್ರ-ತಂತ್ರಗಳೇಕೆ
ಅತಿಯಾಸೆ ಬಿಡದ ಸಂನ್ಯಾಸಿ ತಾನೇಕೆ || ೨ ||

ಕಾಮವಿಲ್ಲದವಂಗೆ ಕಾಂತೆಯರ ಗೊಡವೇಕೆ
ಪ್ರೇಮವಿಲ್ಲದ ಬಂಧು ಬಳಗವೇಕೆ
ಸ್ವಾಮಿ ಶ್ರೀ ಪುರಂದರ ವಿಠ್ಠಲನ ನೆನಯದ
ತಮಾಸದ ಜನರಿಂಗೆ ಕೈವಲ್ಯವೇಕೆ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹರಿಸ್ಮರಣೆಯಿಲ್ಲದೆ ಇರುವ ಸೋಮಾರಿಯು ಮೋಕ್ಷವನ್ನು ಅಪೇಕ್ಷಿಸಿದರೆ ಅದು ಸಿಕ್ಕೀತೆ? - ಎಂಬುದನ್ನು ದಾಸರು ಇಲ್ಲಿ ಅನೇಕ ದೀಪಕ ಉದಾಹರಣೆಗಳೊಂದಿಗೆ ಹೇಳಿದ್ದಾರೆ.

**ಓಡು** – ಮಡಕೆಯ ಚೂರು.

**ಹರಿವಾಣ** – ಚಿನ್ನದ ತಟ್ಟೆ.

**ಬಿಂಕತನ** – ಹೆಮ್ಮೆ.

**ಪ್ರೌಢತನ** – ಗರ್ವ.

**ಮಡಿ** – ಒಗೆದು, ಗಂಜಿಹಾಕಿದ ಬಟ್ಟೆ.

**ಡೊಂಬಾಟವಿಕ್ಕುವಗೆ** – ಜನರೆದುರು ಬೀದಿಯಲ್ಲಿ ಲಾಗ ಹಾಕುವವನಿಗೆ.

**ಭೂಸುರರ** – ಸಜ್ಜನರನ್ನು.

**ಭೂರಿ ಧರ್ಮ** – ಹೆಚ್ಚಾದ ದಾನ, ಆಡಂಬರದಿಂದ ಮಾಡುವುದು.

**ಭಾಷೆಗೆಟ್ಟವಗೆ** – ಕೊಟ್ಟ ಮಾತನ್ನು ನಡೆಸದವನಿಗೆ.

**ಕ್ಲೇಶ** – ಅವಿದ್ಯೆ, ಅಸ್ಮಿತಾ (ಅಹಂಕಾರ), ರಾಗ, ದ್ವೇಷ, ಅಭಿನಿವೇಶಗಳು ಪಂಚ ಕ್ಲೇಶಗಳೆನಿಸಿಕೊಳ್ಳುತ್ತವೆ.

**ಗತಿಯ…** – ಮೋಕ್ಷವನ್ನು ಬಯಸದವನು ಬ್ರಾಹ್ಮಣನಾಗಿ ಏನು ಪ್ರಯೋಜನ?

**ತಾಮಸಾಧಮನಿಗೆ** – ನೀಚನಿಗೆ.

**Classification:** Keerthane
**Ankita:** sri purandara vittala
**Location:** NA
**Category:** Loka Neeti, Nama Smarane
**Sub-Category:** abhimana, jnana, kaadu, bangara, amruta, Krishna, sura, bhumi, dharma, tirtha, ase, vrata, patni, mantra, brahmana, prema, bandhu, jana, vaikunta, madi, garva,

**Pravachana:** NA

**Explanation:** NA